ಎಲ್.ಎ.ಸಿ.ಸಂಖ್ಯೆ: 58/2017
ಪಿ ಡಬ್ಲೂ: 1

ಈ ದಿನ ಅಂದರೆ ದಿಃ *12-09-2025* ರ ಆದೇಶದ ಮೇರೆಗೆ ಸಾಕ್ಷಿಯನ್ನು ಪುನಃ ಮುಖ್ಯ ವಿಚಾರಣೆಗೆ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಬಿ.ಪಿ.ಆರ್. ವಕೀಲರಿಂದ ಅರ್ಜಿದಾರರ ಪರವಾಗಿಃ**

*4.* ದಿಃ *04-10-2016* ರಂದು ತರೀಕೆರೆ ತೋಟಗಾರಿಕೆ ಇಲಾಖೆಯವರು ನೀಡಿರುವ ತೋಟಗಾರಿಕೆ ಬೆಳೆಗಳ ವರದಿಯ ದೃಢೀಕೃತ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ.***19*** ಎಂದು, ದಿಃ *06-08-2025* ರಂದು ತರೀಕೆರೆ ಎ.ಪಿ.ಎಂ.ಸಿ. ಕಾರ್ಯದರ್ಶಿರವರು ಸಾಕ್ಷಿಗೆ ನೀಡಿರುವ ಬೆಳೆಗಳ ಧಾರಣೆ ಮಾಹಿತಿಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ.***20*** ಎಂದು, ತರೀಕೆರೆ ಎ.ಪಿ.ಎಂ.ಸಿ. ಕಾರ್ಯದರ್ಶಿರವರು ನೀಡಿರುವ *2011-2012* ರಿಂದ *2021-2022* ನೇ ಸಾಲಿನ ಕೃಷಿ ಉತ್ಪನ್ನಗಳ ಮಾರುಕಟ್ಟೆ ವಿವರದ ತಃಖ್ತೆಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ.***21*** ಎಂದು ಮತ್ತು *2010-2011* ರಿಂದ ಪ್ರಸ್ತುತ ಸಾಲಿನವರೆಗಿನ ಚಾಕೋನಹಳ್ಳಿ ಗ್ರಾಮಕ್ಕೆ ಸಂಬಂಧಿಸಿದ ತರೀಕೆರೆ ಉಪ ನೋಂದಣಾಧಿಕಾರಿಯವರು ನೀಡಿರುವ ಪರಿಷ್ಕೃತ ದರಗಳ ಪಟ್ಟಿಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ.***22*** ಎಂದು ಗುರುತಿಸಲಾಯಿತು.

(ಅರ್ಜಿದಾರರ ಪರ ವಕೀಲರ ಕೋರಿಕೆಯ ಮೇರೆಗೆ ಸಾಕ್ಷಿಯ ಮುಂದಿನ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ಭಾನುಮತಿ ಬಿ.ಸಿ)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.